ಚಳ್ಳಕೆರೆ ತಾಲ್ಲೂಕಿನಲ್ಲಿರುವ ಗೋಮಾಳ.

2756: (3812)

ಶ್ರೀ ಎನ್.ವೈ. ಗೋಪಾಲಕೃಷ್ಣ (ಮೊಳಕಾಲ್ಮುರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ತಾಲ್ಲೂಕಿನಲ್ಲಿರುವ ಗೋಮಾಳವೆಷ್ಟು?

ಆ) ಇದರಲ್ಲಿ ಈಗಾಗಲೇ ಎಷ್ಟು ಎಕರೆಯಲ್ಲಿ ಬಗರ್ ಹುಕುಂ ಸಾಗುವಳಿಯಾಗುತ್ತಿದೆ? ಹಾಗೂ ಎಷ್ಟು ಎಕರೆ ಪ್ರದೇಶ ಖಾಸಗಿ ವ್ಯಕ್ತಿಗಳಿಂದ ಒತ್ತುವರಿಯಾಗಿದೆ?

ಇ) ಈ ಗೋಮಾಳ ಭೂಮಿಯನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಬಿ.ಸೋಮಶೇಖರ್ (ಕಂದಾಯ ಸಚಿವರು):

ಅ) 24,892-15 ಎಕರೆ

ಆ) ಒಟ್ಟು 18,358 ಎಕರೆ ಹುಕುಂ ಸಾಗುವಳಿಯಾಗುತ್ತಿದೆ: ಇದರಲ್ಲಿ

1) 6901-37 ಎಕರೆ ಗೋಮಾಳ ಜಮೀನನ್ನು ಸಕ್ರಮೀಕರಣ ಕಾರ್ಯಕ್ರಮದಡಿ ಸೆಪ್ಟಂಬರ್ 1998ರ ಅಂತ್ಯದವರೆಗೆ ಸಕ್ರಮೀಕರಿಸಿ ಆದೇಶಿಸಲಾಗಿದೆ.

2) 2304-20 ಎಕರೆ ಅನಧಿಕೃತ ಅಧಿಭೋಗದಾರಿಕೆಯ ಜಮೀನಿನ ಸಕ್ರಮೀಕರಣದ ಬಗ್ಗೆ ಸಮಿತಿಯಲ್ಲಿ ತೀರ್ಮಾನವಾಗಲು ಬಾಕಿ ಇದೆ.

3) 9153-08 ಎಕರೆ ಜಮೀನನ್ನು ಖಾಸಗಿ ಹಿಡುವಳಿದಾರರು ಒತ್ತುವರಿ ಮಾಡಿ ಅರ್ಜಿಸಲ್ಲಿಸಿದ್ದು ಸಮಿತಿಯಲ್ಲಿ ತಿರಸ್ಕರಿಸಿ ಆದೇಶವಾಗಿರುತ್ತದೆ.

ಇ) ಅನಧಿಕೃತ ಸಾಗುವಳಿ ಸಕ್ರಮೀಕರಣ ಕೋರಿ ಅರ್ಜಿಸಲ್ಲಿಸಿ, ಸಮಿತಿಯಲ್ಲಿ ಅನರ್ಹ ಪ್ರಕರಣಗಳೆಂದು ತೀರ್ಮಾನಿಸಲ್ಪಟ್ಟ ಪ್ರಕರಣಗಳಲ್ಲಿ ಅನಧಿಕೃತ ಅಧಿಭೋಗದಾರರನ್ನು ತೆರವುಗೊಳಿಸುವ ಬಗ್ಗೆ ಕ್ರಮ ಕೈಗೊಳ್ಳಲು ತಹಶೀಲ್ದಾರರುಗಳಿಗೆ ನಿರ್ದೇಶನ ನೀಡಿದೆ.